Doc-16
T-P-2

Regn No M 1229 | 43rd Year | Sri 'Satyavadi' Mysore | 13—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಪ್ಲೇದಾರ್ ಎ. ನಿ ಸುಬ್ಬರಾಯುರು [ಬಿಡಿ ಪ್ರತಿ3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಬಂಗಾಳ ಗಡಿಯಲ್ಲಿ ಪಾಕಿಸ್ತಾನ ಸೇನೆಯ ಜಮಾವಣೆ

ಅಲ್ಯೂಮಿನಿಯಂ ಕಟ್ಟಡ

ಮಾಸ್ಕೋ ನಗರದಲ್ಲಿ ಐದಂತಸ್ತುಗಳ ಅಲ್ಯೂಮಿನಿಯಂ ಕಟ್ಟಡದ ನಿರ್ಮಾಣ ಕಾರ್ಯವನ್ನು ವಾಸ್ತುಶಿಲ್ಪಿಗಳೂ, ಯಂತ್ರಶಿಲ್ಪಿಗಳೂ ಕೈಗೊಂಡಿದ್ದಾರೆ ;—ಹಗುರವಾದೂ ಸಹ ಗಟ್ಟಿಯಾಗಿರುವವಾಯು ಗಾಜು ಗೋಡೆಯು ಒಳ ಭಾಗದಲ್ಲಿದ್ದು ಶಬ್ದಶಾಖ ನಿರೋಧಕವಾಗಿರುವುದು; ಕಟ್ಟಡವು ತುಂಬಾ ಅಂದವಾಗಿರುವುದು.

ಹಾವು ಕಡಿದವರ ಸಂಖ್ಯೆ

ನವದೆಹಲಿ 12 — ಭಾರತದಲ್ಲಿ ಪ್ರತಿವರ್ಷ ಎಷ್ಟು ಮಂದಿಗೆ ಹಾವು ಕಡಿಯುತ್ತದೆ ? ಎಂಬ ಖಚಿತವಾದ ಸಂಖ್ಯೆ ಗೊತ್ತಿಲ್ಲವಾದರೂ ಈ ಸಂಖ್ಯೆ ಸುಮಾರು ಎರಡು ಲಕ್ಷವೆಂದು ಅಂದಾಜುಮಾಡಲಾಗಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು — ಹಾವು ಕಡಿದವರಿಗೆ ಪರಿಣಾಮಕಾರಿಯಾದ ಚಿಕಿತ್ಸೆಯೆಂದರೆ, ಅದಕ್ಕಾಗಿ ಸಂಶೋಧಿಸಿರುವ ಪ್ರತಿಶಕಮಸೀರಂ ; ಅದನ್ನು ಸರಕಾರದವರು ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ಔಷಧಾಲಯಗಳಲ್ಲಿಯೂ ದಾಸ್ತಾನಿನಲ್ಲಿಡಲಾಗಿದೆಯೆಂದೂ ತಿಳಿಸಲಾಯಿತು.

ಜೀವವಿಮಾ ಕಾರ್ಪೊರೇಷನ್

ನವದೆಹಲಿ 10— 1956 ರ ಸೆಪ್ಟೆಂಬರು 1 ರಿಂದ ಡಿಸೆಂಬರು 31 ರವರೆಗೆ ಅಂದರೆ 16 ತಿಂಗಳ ಕಾಲಾವಧಿಯಲ್ಲಿ ಜೀವವಿಮಾ ಕಾರ್ಪೊರೇಷನ್ನಿನ ಒಟ್ಟು ಪ್ರೀಮಿಯಂ ಪ್ರಮಾಣ ಸುಮಾರು 27.3 ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಮಾಲೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋತಿಷಿ ತಂದಿಂದ
1೯ ಕನ್ನಿವಾಂ ಸಂಪಮಿ ಭಾಂಡೆ

ಮುರ್ಷಿದಾಬಾದ್ 12 — ಭಾರತ ಗಡಿ ಗ್ರಾಮ ಚಾರ್ ರಾಜಾ ನಗರ್ ಮೇಲೆ ಪಾಕಿಸ್ತಾನದ ಶಸ್ತ್ರಾಸ್ತ್ರ ಸೇನೆ ಎಡಬಿಡದೆ ಗುಂಡುಹಾರಿಸಲು ಆರಂಭಿಸಿ 4 ದಿನಗಳಾದವು. ಗುಂಡಿನೇಟು ಏಕಪ್ರಕಾರ ನಡೆಯುತ್ತಿರುವದರಿಂದ ಸಂಗಡಲೇ, ಪಾಕಿಸ್ತಾನದ ಪಕ್ಕದ ಗಡಿಯಲ್ಲಿ ಪಾಕಿಸ್ತಾನ ಭಾರಿ ಸೇನೆಯ ಜಮಾವಣೆ ಮಾಡುತ್ತಿದೆ ಪಾಕಿಸ್ತಾನದ ಸೇನೆಯ ಸಂಚಾರಕ್ಕೆ ಹೆಲಿಕಾಪ್ಟರ್ ಉಪಯೋಗ ಆಗುತ್ತಿದೆ.

ನಿಲುವಳಿ ಸೂಚನೆಗೆ ತಿರಸ್ಕಾರ

ಕಲ್ಕತ್ತಾ 11 — ಭಾರತೀಯರ ಮೇಲೆ ಪಾಕಿಸ್ತಾನ ಸೇನೆಯು ಏಕಪ್ರಕಾರವಾಗಿ ಗುಂಡು ಹಾರಿಸುತ್ತಿರುವ ಬಗ್ಗೆ ಪಶ್ಚಿಮ ಬಂಗಾಳ ವಿಧಾನ ಸಭೆಯಲ್ಲಿ ವಿರೋಧ ಪಕ್ಷ ಮಂಡಿಸಿದ ನಿಲುವಳಿ ಸೂಚನೆ ತಿರಸ್ಕೃತವಾಯಿತು.

ಗುಂಡಿನೇಟಿನಿಂದ 4 ಮರಣ

ಜಲಂಧರ 12 — ಫಾಗ್ವಾರ ಶಹರ ಸೀಲ್ಡಾರಂಗ ನಾರಾಯಣಪುರ ಗ್ರಾಮಕ್ಕೆ ಕಂದಾಯ ವಸೂಲಾತಿಗೆ ಹೋದಾಗ ಅಲ್ಲಿನ ಜನ ಪ್ರತಿಭಟಿಸಿ ಪೋಲೀಸರ ಮೇಲೆ ಆಕ್ರಮಣ ಮಾಡಲು ಹೋದಾಗ ಪೋಲೀಸರು ಗುಂಡುಹಾರಿಸಲು ನಾಲ್ವರು ಮರಣಹೊಂದಿ ಹನ್ನೆರಡು ಜನ ಗಾಯಗೊಂಡರು.

ಪ್ರದರ್ಶನ

ನವದೆಹಲಿ 10 — ನ್ಯಾಶನಲ್ಸ್ ದಿನಲ್ಲಿ ಬಂಧನ ಮತ್ತು ಗೋಳೀಬಾರ್ ಖಂಡಿಸಿ 40 ಆಫ್ರಿಕಾ ವಿದ್ಯಾರ್ಥಿಗಳು ಬ್ರಿಟಿಷ್ ಹೈಕಮಿಷನರ್ ಕಚೇರಿ ಎದುರು ಪ್ರದರ್ಶನ ನಡೆಸಿದರು.

× ನ್ಯೂಯಾರ್ಕ್ 11 — 1971 ಕ್ಕೆ ಅಮೇರಿಕಾ ಜನಸಂಖ್ಯೆ 21ಕೋಟಿಗೇರುತ್ತೆ

ಉತ್ಪಾದನೆ ಇಳುವರಿ

ನವದೆಹಲಿ 12 — 57-58 ರಲ್ಲಿ ಆಹಾರೋತ್ಪಾದನೆ 6.7 ಮಿಲಿಯ ಟನ್‌ಗಳಷ್ಟು ಇಳಿತಾಯ ಆಗಿದೆ ಎಂದು ಆಹಾರ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನ್ ಲೋಕಸಭೆಯಲ್ಲಿ ತಿಳಿಸಿದರು

ಭಾರತ ಆಕ್ರಮಣಕ್ಕಲ್ಲ

ನವ ದೆಹಲಿ 12 — ಪಾಕಿಸ್ತಾನ ಭಾರತವನ್ನು ಆಕ್ರಮಣ ಮಾಡಲಿ ಎಂಬ ಭಾವನೆಯಿಂದ ತಾನು ಪಾಕಿಸ್ತಾನಕ್ಕೆ ಸೇನಾ ನೆರವು ಕೊಟ್ಟಿಲ್ಲವೆಂದು ಅಮೇರಿಕಾ ತಿಳಿಸಿದೆ ಎಂದು ಪಂ|| ನೆಹರು ಲೋಕಸಭೆಯಲ್ಲಿ ತಿಳಿಸಿದರು

ರಷ್ಯದ ಸೂಚನೆ

ಕಂಚಿ 12 — ಅಮೇರಿಕಾ-ಪಾಕಿಸ್ತಾನದ ಒಪ್ಪಂದದ ಬಗ್ಗೆ ರಷ್ಯ ಪಾಕಿಸ್ತಾನಕ್ಕೆ ಬಲವಾದ ಸೂಚನೆಯನ್ನು 2 ನೇ ಬಾರಿ ಕಳಿಸಿದೆ.

ವಿಧಾನ ಸಭೇಲಿ ಒತ್ತಾಯ

ಬೆಂಗಳೂರು 12 — ಹಾಸನ-ಮಂಗಳೂರು ರೈಲ್ವೆ ನಿರ್ಮಾಣ ಬೇಗ ಆಗುವಂತೆ ಕೇಂದ್ರವನ್ನು ಒತ್ತಾಯ ಮಾಡುವಂತೆ ವಿಧಾನ ಸಭೆಯಲ್ಲಿ ಸದಸ್ಯರು ಒತ್ತಾಯ ಮಾಡಿದರು

ನಿಲುವಳಿಗೆ
ನಿರಸ್ಕಾರ

ಬೆಂಗಳೂರು 12 — ಮೈಸೂರು ವಿಧಾನ ಸಭೆಯಲ್ಲಿ, ಬಳ್ಳಾರಿ ಬಂದೀಖಾನೆಯಲ್ಲಿ ಬೆಳಗಾಂ ಸತ್ಯಾಗ್ರಹಿಗಳನ್ನು ಕಾಣುವ ಮತ್ತು 9 ನೇ ತಾ|| ಬಂದೀಖಾನೆಯಲ್ಲಿ ಮಾಣಹೊಂದಿದ ಸತ್ಯಾಗ್ರಹಿ ಒಪಲಪ್ಪ ಚಾಗತಿ ಬಗ್ಗೆ ಕಳಿಸಿದ ನಿಲುವಳಿ ಸೂಚನೆ ತಿರಸ್ಕೃತವಾಯಿತು

ಪ್ರತಿಭಟನಾ ದಿನ

ಕಲ್ಕತ್ತಾ 11 — ಪಶ್ಚಿಮ ಬಂಗಾಳದ ಬೆರುಬರಿ ಮತ್ತಿತರ ಪ್ರದೇಶಗಳನ್ನು ಪಾಕಿಸ್ತಾನಕ್ಕೆ ವರ್ಗಾವಣೆ ಮಾಡುವ ಸೂಚನೆಯು ವಿರುದ್ಧ ಮುಂದಿನ ತಿಂಗಳು 4 ನೇ ತಾ|| ಪ್ರತಿಭಟನಾ ದಿನ ಆಚರಿಸಬೇಕೆಂದು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಕರೆಕೊಟ್ಟಿದೆ.

ಕೃತಕ ಧೂಮಕೇತು

ಪ್ಯಾರಿಸ್ 11 — ಫ್ರಾನ್ಸು ತನ್ನ ಪ್ರಥಮ ಧೂಮಕೇತುವನ್ನು ನಿರ್ಮಿಸಿದೆ

ಪೋಲೀಸು ಮೇಲೆ ಆರೋಪ

ಭೂಪಾಲ್ 11 — ಮಧ್ಯ ಪ್ರದೇಶದ ಧಕಾಯಿತರ ಪ್ರದೇಶದಲ್ಲಿ ಅವರ ಸಂಗಡ ಪೋಲೀಸರು ಹೊಂದಿಕೊಂಡಿರುವರೆಂದು ಕಾಂಗ್ರೆಸು ಸದಸ್ಯ ಶ್ರೀ ಕುತವಾ ವಿಧಾನ ಸಭೆಯಲ್ಲಿ ತಿಳಿಸಿದರು

ಅಮೇರಿಕ ಶಸ್ತ್ರ

ಕಲ್ಕತ್ತಾ 11 — ಮುರ್ಷಿದಾಬಾದ ಜಿಲ್ಲೆಯ 3 ಗಡಿ ಗ್ರಾಮಗಳ ಮೇಲೆ ಗೋಳೀಬಾರು ಮಾಡಲು ಪಾಕಿಸ್ತಾನ ಸೇನಿಕರು ಅಮೇರಿಕಾ ಆಯುಧ ಉಪಯೋಗಿಸುತ್ತಿರುವರು

ಸತ್ಯಾಗ್ರಹ ನಿಲ್ಲಿಸಿ

ಕರ್ನಾಟಕ ಗಡಿ ಕ್ರಿಯಾ ಸಮಿತಿ ಜಂಟಿ ಕಾರ್ಯದರ್ಶಿ ಶ್ರೀ ಅದ್ಯ ರಂಗಾಚಾರ್ಯರು ಹೇಳಿಕೆಯಿತ್ತು, ಗಡಿ ಸತ್ಯಾಗ್ರಹವನ್ನು ಕೊನೆ ಮಾಡುವಂತೆ ತಿಳಿಸಿರುವರು.

ಬೊಂಬಾಯಿ 11 — ಆಹಾರ ಪರಿಸ್ಥಿತಿ ಉತ್ತಮವಾಗುವದೆಂದು ಪಂ| ನೆಹರು ಹೇಳಿದ್ದಾರೆ.

ಮಾಸ್ಕೊ-ಲಂಡನ್ನುಗಳಲ್ಲಿ ಔದ್ಯೋಗಿಕ ಪ್ರದರ್ಶನ

ಮಾಸ್ಕೊ 4— ಸೋವಿಯಟ್ ವಾಣಿಜ್ಯಸದನಾಧ್ಯಕ್ಷ ಏ ಐ ಮಿ ಲ್ ನೆಸ್ಕೆರೋವರು ಬ್ರಿಟಿಷ್ ವಾಣಿಜ್ಯ ಸದನದ ಸಿಯೋಗವನ್ನು ಸ್ವಾಗತಿಸಿ ಮಾತನಾಡಿದರು — ಮಾಸ್ಕೊ-ಲಂಡನ್ನುಗಳಲ್ಲಿ ಔದ್ಯೋಗಿಕ ಪ್ರದರ್ಶನಗಳನ್ನು ನಡೆಸುವ ಸಾಧ್ಯತೆಯ ಬಗ್ಗೆ ವಿಚಾರವಿನಿಮಯಗಳು ನಡೆಯುತ್ತಿವೆ.

ಸ್ವಯಂಚಲಿತ ಗಣಿ

ತ್ರಿವೋಯಂತಾಗ್ ಪಾಂತ್ರದಲ್ಲಿ ಅತ್ಯಂತ ದೊಡ್ಡ ಕಬ್ಬಿಣದ ಗಣಿಯನ್ನು ನಿರ್ಮಿಸುವ ಕಾರ್ಯ ಪ್ರಾರಂಭವಾಗಿದೆ; ಇಲ್ಲಿ ಎಲ್ಲ ಕೆಲಸಗಳನ್ನೂ ಯಂತ್ರಗಳು ತಾವಾಗಿ ನಡೆಸುವವು

ಅಮೇರಿಕಾದಲ್ಲಿ ಭಾರತೀಯ ಕಲೆ, ಸಾಹಿತ್ಯ ಮತ್ತು ಚಲಚ್ಚಿತ್ರಗಳ ಪರಿಚಯ

ಭಾರತೀಯ ಕಲೆ, ಸಾಹಿತ್ಯ ಮತ್ತು ಚಲಚಿತ್ರಗಳನ್ನು ಫೆಬ್ರವರಿಯಲ್ಲಿ ಅಮೇರಿಕಾದ ಸಾಂಸ್ಕೃತಿಕ ವರ್ತುಲಗಳಲ್ಲಿ ಪ್ರಶಂಸಿಸಲಾಯಿತು ಮತ್ತು ಭಾರತೀಯ ಸಂಸ್ಕೃತಿಯ ಇತರ ಮುಖಗಳಿಗೆ ಸಂಬಂಧಿಸಿದ ಭವಿಷ್ಯದ ಕಾರ್ಯಕ್ರಮಗಳ ಯೋಜನೆಗಳನ್ನು ಈಗಾಗಲೇ ತಯಾರಿಸಲಾಗುತ್ತಿದೆ — ಈ ಸಾಮ್ರಾಜ್ಯಮಯ ಕವಿತಾ ಸಂಕಲನದಲ್ಲಿ ಭಾರತದ ಹನ್ನೊಂದು ಮುಖ್ಯ ಭಾಷೆಗಳ ಕವಿತೆಗಳೂ ಇವೆ — ಈ ವಿಶೇಷ ಸಂಚಿಕೆಯ ಮೊದಲನೆ ಕವಿತೆ ರವೀಂದ್ರನಾಥ ಠಾಕೂರರದು ; 60-ರಲ್ಲಿ ಈ ಮಹಾಕವಿಯ ಜನ್ಮದಿನದ ಶತಮಾನೋತ್ಸವ ; ಇವರು ಅನೇಕ ಬಾರಿ ಅಮೇರಿಕಾವನ್ನು ಸಂದರ್ಶಿಸಿದರು ಮತ್ತು ಇವರ ಕೃತಿಗಳು ಒಹುಶಃ ಭಾರತದ ಇತರ ಯಾವುದೇ ಕಲಾವಿದನ ಅಥವಾ ಸಾಹಿತಿಯ ಕೃತಿಗಳಿಗಿಂತ ಹೆಚ್ಚು ಅಮೇರಿಕಾದಲ್ಲಿ ಪರಿಚಿತವಾಗಿದೆ — ಭಾರತದ ಪೈಂಟಿಂಗುಗಳು ಎಂಬ ಹೆಸರಿನ ಭಾರತದ ಸಮಕಾಲಿನ ಕಲೆಯ ಪ್ರದರ್ಶನವೊಂದು ನ್ಯೂಯಾರ್ಕಿನ ವಿಮರ್ಶಕ ಸ್ವಭಾವದ ಕಲಾಪ್ರಿಯರಲ್ಲಿ ಬಹಳ ಆಸಕ್ತಿಯನ್ನು ಉಂಟುಮಾಡಿದೆ — ಇಂಡಿಯಾ ಕೊಆಪರೇಟಿವ್ ಯೂನಿಯನ್ನಿನ ಸಲಹೆಗಾರ ಥಾಮಸ್ ಕೀಹ್ನರು ಭಾರತದ ಕಲಾವಿದರಿಂದ 100 ಪೈಂಟಿಂಗುಗಳನ್ನು ಸಂಗ್ರಹಿಸಿ, ಅವುಗಳನ್ನು ನ್ಯೂಯಾರ್ಕ್ ಗ್ಯಾಲರಿಗಳಿಗೆ ಕಳುಹಿಸಿದರು

ಹಕ್ಕಿದ ಚಿತ್ರ

1 1818 ನಲ್ಲಿ ಒಂದು ವಿಚಿತ್ರ ಖಾಯಿಲೆ ಬಂದು ಅನೇಕ ಜನರೂ ದನಗಳೂ ಸತ್ತವು ; ಎಬ್ರಹಂ ಲಿಂಕನ್ನಿನ ತಾಯಿಯೂ ಸತ್ತಳು , ತಂದೆ ಮಗ ಆಕೆಯ ಶವಪೆಟ್ಟಿಗೆ ತಯಾರಿಸಿದರು.

2 ಲಿಂಕನ್ ಸಂಸಾರದಲ್ಲಿ ಘೋರ ಸಂಕಟ ಪ್ರಾಪ್ತವಾಯಿತು ; ಮಕ್ಕಳಿಗೆ ತಾಯಿಲ್ಲದ ಕೊರಂತೆ : ತಂದೆ ಉಪಾಂಕ್ಯಾಗಿ ಹೆಚ್ಚು ಕಾಲ ಬೇಟೆಯಲ್ಲೇ 9 ವರ್ಷದ ಪರ್ಯಂತ ತನ್ನ ತಂಗೆಯನ್ನು ಸಂತೈಸುತ್ತಿದ್ದ.

3 ತುದಿಯು ಹೊಸ ತಾಯನ್ನು ತಂದೆಯ್ದು. ಸಂಸಾರದಲ್ಲಿ ಸಂತೋಷ ಮೂಡಿತು : ಈಕೆ ವಿಧವೆ, ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳ ತಾಯಿ , ಈ ನೂತನ ಲಿಂಕ್ ಸತಿ ಗಟ್ಟಿಮುಟ್ಟಾಗಿ ಶಕ್ತಿವಂತಳಾಗಿದ್ದಳು : ಸಂಸಾರವನ್ನು ಸರಿಪಡಿಸಿ ಸಂತೋಷದ ಬೀಡು ಮಾಡಿದಳು.

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ For Quality Printing

ಅ ಶೋ ಕಾ ಫಾರ್ಮಸಿ L. N. Press

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು Sivarampet, Mysore

ವುಡ್‌ಲ್ಯಾಂಡ್ 13-3-59 ರಿಂದ
ಶಿಲ್ಪ ಅಮೋಘ ಆರಂಭ

— ನವಶೈತರವರ —

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ

ತಾರಾಗಣ— ದೇವ್‌ಆನಂದ್, ವಹೀದಾಬಾಲ, ನಳಿನಿಜಯವಂತ್, ಕಿಶೋರ್ ಸಾಹು

ದಿಗ್ದರ್ಶನ ರಾಜ್ ಖೋಸ್ಲ — ನೋಡಲು ಮರೆಯಬೇಡಿ — ಸಂಗೀತ ಎಸ್. ಡಿ ಬರ್ಮನ್

ಅಪೆರಾ— 14-3-59 ರಿಂದ

ಅಮೋಘ ತೆಲುಗು ಚಿತ್ರ ಪ್ರತಿದಿನ 3 ಆಟಗಳು

ಸಂತೋಷಂ

ಪಾತ್ರ— ಎನ್ ಟಿ ರಾಮರಾವ್, ಅಂಜಲಿ, ನಾಗೇಂದ್ರರಾವ್, ಲೇಲಂಗಿ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋಂಕ್ಷಣ ಪತ್ರಿಕೆಗೆ ಚಂದಾದಾರರಾಗಿರಿ

Edited, Printed & Published by Dharma Prachara Nirata M. S. Krishna Rao, at the Satyavadi Press Chamarajapuram, Mysore.